ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿಯವರು : ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

(1) ಗುಲ್ಬರ್ಗಾ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರ ಉಪಾಧ್ಯಕ್ಷರ ಚುನಾವಣಾ ಸಂದರ್ಭದಲ್ಲಿ ನಡೆದ ಗೋಲಿಬಾರ್ ಪ್ರಕರಣದ ಬಗ್ಗೆ ತನಿಖೆ ನಡೆಸಲು ರಚಿಸಲಾದ ಜಂಟಿ ಸದನ ಸಮಿತಿಯ ವರದಿ.

(2) 1994-95ನೇ ಸಾಲಿನ ಕಂದಾಯ, ಅರಣ್ಯ, ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಇಲಾಖೆಯ ಮೇಲಿನ ವಿಷಯ ಸಮಿತಿಯ ಎರಡನೆಯ ವರದಿ.

(3) ವಾರ್ತಾ ಮತ್ತು ಪ್ರಚಾರ, ಯುವಜನ ಸೇವೆ, ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವಿಷಯ ಸಮಿತಿಯ 2ನೇ ವರದಿ.

i) ರಾಷ್ಟ್ರೀಯ ಕ್ರೀಡೆಗಾಗಿ ಕೋರಮಂಗಲದ ಬಳಿ ಕ್ರೀಡಾ ಸಮುಚ್ಚಯ ನಿರ್ಮಿಸಲು ಕರೆಯಲಾದ ಟೆಂಡರ್‌ನಲ್ಲಿ ಅವ್ಯವಹಾರ

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ ಇಂದು ಬೆಳಿಗ್ಗೆ 8-50ಕ್ಕೆ ನಾನು ನಿಮ್ಮ ಸೆಕ್ರೆಟರಿ ಕಚೇರಿಯ ಹತ್ತಿರ ಕಾದು ನಿಂತಿದ್ದೆನು. ಅತ್ಯಂತ ಮಹತ್ವದ ವಿಚಾರದ ಬಗ್ಗೆ ಈ ಸ್ಥಾನದಲ್ಲಿ ನಿಂತು ನಾನು ಪ್ರಸ್ತಾಪ ಮಾಡದಿದ್ದರೆ ನನ್ನ ಕರ್ತವ್ಯ ಚ್ಯುತಿಯಾಗಬಹುದು ಎನ್ನುವ ದೃಷ್ಟಿಯಿಂದ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ಇವೊತ್ತು ರಾಷ್ಟ್ರೀಯ ಕ್ರೀಡೆಗಾಗಿ ನಗರದ ಕೋರಮಂಗಲಕ್ಕ ಬಳಿ ಸುಮಾರು 250 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕ್ರೀಡಾ ಸಮುಚ್ಚಯವನ್ನು ನಿರ್ಮಿಸಲು ಕರೆಯಲಾದ ಒಂದು ಟೆಂಡರ್‌ನಲ್ಲಿ ಭಾರಿ ಅವ್ಯವಹಾರ ನಡೆದಿದೆ ಎಂದು ಆಡಳಿತ ಪಕ್ಷದ ಶಾಸಕಾಂಗ ಪಕ್ಷದ ಸಭೆಯಲ್ಲಿ ನಡೆದ ವಿಚಾರವು ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ ಪ್ರಕಟವಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಚುನಾವಣೆಗೆ ಮುನ್ನ ಒಂದು ಮಹತ್ತರವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಚುನಾವಣೆ ನಡೆಸುವ ವೇಳಾಪಟ್ಟಿ ಪ್ರಕಟವಾದ ಮೇಲೆ ತರಾತುರಿಯಲ್ಲಿ ಅವೊತ್ತು ಇದ್ದಂಥ ಸರಕಾರ ಕೆಲವು ಕಾಮಗಾರಿಗಳನ್ನು ಕೊಟ್ಟಿದ್ದಾರೆ, ಟೆಂಡರ್ ಕರೆಯಬೇಕಾದಂಥ ಮತ್ತು ಇತರ ಫಾಲೋ ಮಾಡಬೇಕಾದಂಥ ಪ್ರೊಸೀಜರ್‌ಗಳನ್ನು ಮಾಡಿಲ್ಲ, ಭಾರಿ ಅವ್ಯವಹಾರ ನಡೆಯುವ ಸಂಶಯ ಇದೆ ಎಂದು ಒತ್ತಾಯ ಮಾಡಿದ್ದರು. ಕೋಟಿಗಟ್ಟಲೆ ಬೆಲೆಬಾಳುವ ಒಂದು ಕಾಮಗಾರಿಯನ್ನು ರದ್ದು ಮಾಡುವ ಬಗ್ಗೆ ಅವರ ಮಾತಿನಿಂದ ರದ್ದು ಮಾಡಿದ ಬಗ್ಗೆ ಕೂಡ ಪತ್ರಿಕೆಯಲ್ಲಿ ಬಂದಿದೆ. ಈ ಬಗ್ಗೆ ಕರೆದಿರುವಂಥ ಟೆಂಡರ್ ಏನಿದೆ ಅದರ ಬಗ್ಗೆ ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳು ಏನು ಎನ್ನುವ ಬಗ್ಗೆ ಕೆಲವು ವಿಚಾರಗಳನ್ನು ಕೇಳಲು ಇಚ್ಚಿಸುತ್ತೇನೆ. ಯಾವಾಗ ಈ ಟೆಂಡರ್‌ನ್ನು ಕರೆಯಲಾಯಿತು, ಎಷ್ಟು ಜನರು ಅದಕ್ಕೆ ಅರ್ಜಿಗಳನ್ನು ಹಾಕಿದ್ದರು ಇವರಲ್ಲಿ ಎಷ್ಟು ಜನರಿಗೆ ಅರ್ಹತೆ ಇದೆ ಎಂಬ ವಿಚಾರವನ್ನು ಕೇಳಲಿಚ್ಚಿಸುತ್ತೇನೆ.

ಯಾವ ಹೌಸಿಂಗ್ ಬೋರ್ಡಿನಲ್ಲಿ ಆಶ್ರಯ ಯೋಜನೆಯಲ್ಲಿ ಅವ್ಯವಹಾರ ನಡೆದು ಗುತ್ತಿಗೆಯವರಿಗೆ ಅಡ್ವಾನ್ಸ್ ಕೊಟ್ಟು ದುಡ್ಡನ್ನೇ ಮುಳುಗಿಸಿ ಬಡವರ ಮನೆ ಕಟ್ಟದೇ ಇರತಕ್ಕ ಒಂದು ಗುರುತರ ಆರೋಪಕ್ಕೆ ತುತ್ತಾಗಿತ್ತೋ ಆ ಇಲಾಖೆ ಮೂಲಕ ಟೆಂಡರ್ ಕರೆಸಿರುವುದು ಬಹಳ ಮಹತ್ವದ ಸಂಗತಿ ಇಲ್ಲಿ. ಅದಕ್ಕಾಗಿ ನಾನು ಸರ್ಕಾರವನ್ನು ಕೇಳುವುದಕ್ಕೆ ಇಚ್ಚಿಪಡುತ್ತೇನೆ. ಟೆಂಡರ್‌ನ್ನು ಯಾವ ಇಲಾಖೆಯಿಂದ ಕರೆಯಲಾಗಿತ್ತು? ಇದಕ್ಕಾಗಿ ಏನಾದರೂ ಒಂದು ಸಮಿತಿ ಇತ್ತಾ? ಆ ಸಮಿತಿಯಲ್ಲಿ ಅಧಿಕಾರಿಗಳು ಯಾರಿದ್ದರು? ನನಗೆ ಗೊತ್ತಿರುವ ಪ್ರಕಾರ ಪಿಡಬ್ಲ್ಯುಡಿ ಸೆಕ್ರೆಟರಿ ಇದ್ದರು, ಇತರ ಉನ್ನತ ಅಧಿಕಾರಿಗಳು ಇರಲಿಲ್ಲ, ಹೌಸಿಂಗ್ ಬೋರ್ಡಿನ ಇತರ